KAMS510020852018

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತಾ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 07 ನೇ ಮಾರ್ಚ್ , 2026**

**ಸಿ.ಸಿ./743/2018**

ಪಿರ್ಯಾದುದಾರರು ರಾಜ್ಯದ ಪರವಾಗಿ
ಕವಲಂದೆ ಠಾಣಾ ಪೊಲೀಸರು.
(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು

1. ಸಾವಿತ್ರಮ್ಮ, ಕೋಂ ಶಿವಣ್ಣ, 35 ವರ್ಷ,
2. ಸಿದ್ಧಮ್ಮ, ಕೋಂ ಲೇ. ಮಲ್ಲೇಗೌಡ, 50 ವರ್ಷ
   ಇಬ್ಬರ ವಾಸಃ ಚಿನ್ನದಗುಡಿಹುಂಡಿ ಗ್ರಾಮ, ನಂಜನಗೂಡು ತಾ.
3. ಚಂದ್ರಮ್ಮ, ಕೋಂ ಚಿಕ್ಕಣ್ಣ, 40 ವರ್ಷ
   ವಾಸಃ ಬೆಂದಗಹಳ್ಳಿ ಗ್ರಾಮ, ನಂಜನಗೂಡು ತಾ.

(ಪ್ರತಿನಿಧಿಸುವವರುಃಆರೋಪಿತರ ಪರ **ಶ್ರೀ.ಎನ್ ಎಂ .,** ವಕೀಲರು)

# -:: ತೀರ್ಪು ::-

ಕವಲಂದೆ ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಆರೋಪಿತರು ಭಾರತ ದಂಡ ಸಂಹಿತೆಯ ಕಲಂ. 341,324,114,504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-**

ದಿನಾಂಕಃ27.10.2017 ರಂದು ಬೆಳಗ್ಗೆ 07.30 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ ಠಾಣಾ ಸರಹದ್ದು ಚಿನ್ನದಗುಡಿಹುಂಡಿ ಗ್ರಾಮದ ಚಾಸಾ.1 ರವರ ಮನೆಯ ಮುಂಭಾಗದ ರಸ್ತೆಯಲ್ಲಿ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ನೀವು ಪೊಲೀಸ್ ಠಾಣೆಗೆ ದೂರು ಕೊಟ್ಟು ಏನು ಮಾಡಿಕೊಂಡಿದ್ದೀರಿ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದುಕೊಂಡು 2ನೇ ಆರೋಪಿಯು ಚಾಸಾ.1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಬ್ಬಿ ಹಿಡಿದುಕೊಂಡಾಗ 1ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹಾಗೂ 2 ಕೈಗಳಿಗೆ ಹೊಡೆದು ನೋವುಂಟ ಮಾಡಿದ್ದು, 3ನೇ ಆರೋಪಿಯು ಈ ಮಕ್ಕಳಿಗೆ ಎಷ್ಟು ಖರ್ಚಾದರೂ ಸರಿ ಎಂದು ಕುಮ್ಮಕ್ಕು ನೀಡಿ ನಂತರ 3 ಜನರು ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಕವಲಂದೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು ಭಾ.ದಂ.ಸಂಹಿತೆ ಕಲಂ. 341,324,114,504 ಮತ್ತು 506 ಸಹವಾಚಕ ಕಲಂ.34 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣ ಪತ್ರ ಸಲ್ಲಿಕೆಯಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಲೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಅಭಿಯೋಜನೆ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಕೇಳಿದ ನಂತರ ದೋಷಾರೋಪಣೆಯನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ 10 ಜನ ಸಾಕ್ಷಿದಾರರ ಪೈಕಿ 5 ಜನ ಸಾಕ್ಷಿದಾರರನ್ನು ವಿಚಾರಿಸಿಕೊಂಡು, 4 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಆಪಾದಿಸುವಂತಹ ಯಾವುದೇ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಮನ್ನಾ ಮಾಡಲಾಯಿತು.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

**ಅಂಶಗಳು**

1. ದಿನಾಂಕ 27.10.2017 ರಂದು ಬೆಳಗ್ಗೆ 07.30 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿನ್ನದಗುಡಿಹುಂಡಿ ಗ್ರಾಮದ ಚಾಸಾ-1 ರವರ ಮನೆಯ ಮುಂಭಾಗದ ರಸ್ತೆಯಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ ಚಾಸಾ-1 ರವರಿಗೆ ನೀವು ಪೊಲೀಸ್ ಠಾಣೆಗೆ ದೂರು ಕೊಟ್ಟು ಏನು ಮಾಡಿಕೊಂಡಿದ್ದೀರಿ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

2. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ ಆ ಪೈಕಿ 2 ನೇ ಆರೋಪಿಯು ಚಾಸಾ-1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಬ್ಬಿ ಹಿಡಿದುಕೊಂಡು ಅಕ್ರಮ ತಡೆಯನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.341 ಸಹವಾಚಕ

ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

3. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿಯು ದೊಣ್ಣೆಯಿಂದ ಚಾಸಾ-1ರವರ ತಲೆಗೆ ಮತ್ತು ಎರಡು ಕೈಗಳಿಗೆ ಸ್ವಯಂ ಪ್ರೇರಿತವಾಗಿ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

4 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶಹೊಂದಿ, ಆ ಪೈಕಿ 3 ನೇ ಆರೋಪಿಯು ಈ ಮಕ್ಕಳಿಗೆ ಎಷ್ಟು ಖರ್ಚಾದರೂ ಸರಿ ಎಂದು ಇತರೆ ಆರೋಪಿತರಿಗೆ ಕುಮ್ಮಕ್ಕು ನೀಡಿ ದುಷ್ಪ್ರೇರಣೆ ಮಾಡಿರುತ್ತಾರೆ.ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.114 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

5 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶಹೊಂದಿ ಚಾಸಾ-1ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

6 ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1 ರಿಂದ 5** **:ನಕಾರಾತ್ಮಕವಾಗಿ.**

**ಅಂಶ-6** **: ಅಂತಿಮ ಆದೇಶದಂತೆ.**

**ಈ ಕೆಳಕಂಡ ಕಾರಣಗಳಿಂದ:**

**ಕಾರಣಗಳು**

9. **ಅಂಶ 1 ರಿಂದ 5:-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

10. ದೋಷಾರೋಪಣಾ ಪತ್ರದಲ್ಲಿ ಚಾಸಾ.1 ಪಿರ್ಯಾದಿ ಎಂದು ಮತ್ತು 3 ರಿಂದ 7 ರವರನ್ನು ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಮಹಜರ್ ಸಾಕ್ಷಿದರರು ಎಂದು ನಮೂದಿಸಿದ್ದು, ಅಭಿ ಯೋಜನೆಯ ಪರವಾಗಿ ಚಾಸಾ-1, 3 ರಿಂದ 7 ರವರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಿಸಿಕೊಳ್ಳಲಾಗಿದ್ದು, ಪ್ರಾಸಾ-1 ರಿಂದ 5 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ತಾವು ಯಾವುದೇ ದೂರು ಮತ್ತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ

ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ.

11. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರಿಂದ 5 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದಾಗ್ಯೂ ಕೂಡ ಅವರಿಂದ ಅಭಿಯೋಜನಾ ಪ್ರಕರಣಕ್ಕೆ ಉಪಯುಕ್ತವಾಗುವಂತಹ ಯಾವುದೇ ಮಾಹಿತಿ ಹೊರಬಂದಿರುವುದಿಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ಮತ್ತು 2, 5 ರವರಿಗೆ ತಾವು ನಿಶಾನೆ ಪಿ-1 ಮತ್ತು 2 ಮತ್ತು 4 ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-1, 2 ಮತ್ತು 5 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಆದರೆ ಪ್ರಾಸಾ-1 ಮತ್ತು 2 ರವರು ತಮ್ಮ ಪಾಟೀ ಸವಾಲಿನಲ್ಲಿ ತಾವು ಮತ್ತು ಆರೋಪಿತರು ಗ್ರಾಮದ ಹಿರಿಯರ ಸಮಕ್ಷಮ ರಾಜೀ ಮಾಡಿಕೊಂಡಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣದಿಂದಾಗಿ ಪ್ರಾಸಾ-1 ರಿಂದ 5 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿದಿಲ್ಲ ಎನ್ನಲಡ್ಡಿಯಿಲ್ಲ.

12. ಈ ಪ್ರಕರಣದಲ್ಲಿ ಗಾಯಾಳುಗಳು, ಪ್ರತ್ಯಕ್ಷದರ್ಶಿಗಳು ಮತ್ತು ಮಹಜರ್ ಸಾಕ್ಷಿಗಳಾದ ಪ್ರಾಸಾ.1 ರಿಂದ 5 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿಯದ ಹಿನ್ನೆಲೆಯಲ್ಲಿ ಇತರೆ ಸಾಕ್ಷಿದಾರರನ್ನು ವಿಚಾರಿಸಿಕೊಂಡಾಗ್ಯೂ ಕೂಡಾ ಯಾವುದೇ ಉದ್ದೇಶ ಈಡೇರುವುದಿಲ್ಲ ಎನ್ನುವ ಕಾರಣಕ್ಕೆ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿದಾರರಿಗೆ ಪ್ರೊಸೆಸ್ ನೀಡಬೇಕೆನ್ನುವ ಕೋರಿಕೆಯನ್ನು ತಿರಸ್ಕರಿಸಿ ಇತರೆ ಸಾಕ್ಷಿದಾರರನ್ನು

ಸಾಕ್ಷ್ಯ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಒಟ್ಟಾರೆಯಾಗಿ ಅಭಿಯೋಜನಾ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಆಪಾದನೆ ಇಲ್ಲದಿರುವುದರಿಂದ ಅವರುಗಳ ವಿರುದ್ಧ ಹೊರಿಸಲಾದ ದೋಷಾರೋಪಣೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ ಹೆಚ್ಚಿನ ಚರ್ಚೆಗೆ ಅವಕಾಶ ನೀಡದೇ **ಅಂಶ-1 ರಿಂದ 5 ನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

13. **ಅಂಶ-6:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾಗಿರುವಂತಹ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**-:: ಆದೇಶ ::-**

ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ. 341,324,114,504 ಮತ್ತು 506 ಸಹವಾಚಕ ಕಲಂ.34 ರಡಿಯಲ್ಲಿನ ದೋಷಾರೋಪಣೆಗಳಿಂದ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6

ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್ ನಂ.134/2017(ಪಿ.ಆರ್.ಸಂಃ59/2022), ದಿಃ27.10.2017 ರಲ್ಲಿ ನಮೂದಿಸಿರುವ ಕಾಡು ಜಾತಿಯ ದೊಣ್ಣೆ ನಿಷ್ಪ್ರಯೋಜಕ ಮತ್ತು ಮೌಲ್ಯರಹಿತ ವಸ್ತುವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಯವರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **07 ನೇ ಮಾರ್ಚ್, 2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.

**-ಅನುಬಂಧ-**

**1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

ಪ್ರಾಸಾ-1 : ಶ್ರೀನಿವಾಸ
ಪ್ರಾಸಾ-2 : ಮಹದೇವ
ಪ್ರಾಸಾ-3 : ರೇವಣ್ಣ
ಪ್ರಾಸಾ-4 : ಸುರೇಶ
ಪ್ರಾಸಾ-5 : ಮಲ್ಲಯ್ಯ

**2. ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳುಃ**

ನಿಪಿ-1 :ಪ್ರಾಸಾ.1 ರವರ ಹೇಳಿಕೆ

ನಿಪಿ-2 :ಪ್ರಾಸಾ.2 ರವರ ಹೇಳಿಕೆ

ನಿಪಿ-3 :ಸ್ಥಳ ಮಹಜರ್

ನಿಪಿ-3(ಎ-ಸಿ) :ಸಹಿಗಳು

ನಿಪಿ-4 :ಪ್ರಾಸಾ.5 ರವರ ಹೇಳಿಕೆ

**3. ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳುಃ**

- ಇಲ್ಲಾ -

**4. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

**5. ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.